# IN THE COURT OF THE ADDL. SENIOR CIVIL JUDGE & JMFC., GUBBI

# **OS – 60/2020**

Witness present and duly sworn on : 10.10.2023.

Cross Examination: by Counsel for Plaintiffs :

ನನಗೆ ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಗೊತ್ತಿರುತ್ತದೆ. ನನಗೆ ದಾವಾ ಪತ್ರದ ಸಂಪೂರ್ಣ ಮಾಹಿತಿಯು ಗೊತ್ತಿರುತ್ತದೆ. ನಾನು 2 ನೇ ಪಿ.ಯು.ಸಿ ಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಬಾಷೆ ಅಷ್ಟೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ದಾವೆಯನ್ನು ನರಸಿಂಹಸ್ವಾಮಿರವರ ವಿರುದ್ದ ಸಲ್ಲಿಸಿರುತ್ತೇನೆ. ಆತನು ನನ್ನ ಸ್ನೆಹೀತ. ನನಗೆ ವಾದಿ ನರಸಿಂಹಸ್ವಾಮಿಯ ಪರಿಚಯ ಆತನ ಚಿಕ್ಕ ಹುಡುಗರಿದ್ದಾಗಿನಿಂದಲೂ ಪರಿಚಯ ಇರುತ್ತಾರೆ. ಈಗ ವಾದಿಗೆ ಸುಮಾರು 25-30 ವರ್ಷ ವಯಸ್ಸಾಗಿರುತ್ತದೆ. ಅವರಿಗೆ ಪುಷ್ಪಲತ ರವರೊಂದಿಗೆ ನೆಲಮಂಗಲದಲ್ಲಿ ಮದುವೆ ಆಗಿತ್ತು. ಅವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾಳೆ, ಅವರುಗಳು ಯಶ್ವಂತ್ ಮತ್ತು ಮೋನಿಕಾ. ಅವರ ವಿಧ್ಯಾಭ್ಯಾಸ ಮಾಹಿತಿ ನನಗೆ ಇರುವುದಿಲ್ಲ. ಅವರು ಮಲ್ಲರಬಾಣವಾಡಿಯಲ್ಲಿ ನಮ್ಮ ಮನೆಯ ಪಕ್ಕದಲಿ ವಾಸ ಇರುತ್ತಾರೆ. ವಾದಿ ಯಾವ ದಿನಾಂಕದಂದು ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಲಕ್ಷ್ಮೀಕಾಂತ ನನಗೆ ಚಿಕ್ಕಹುಡುಗರಿದ್ದಾಗಿನಿಂದಲೂ ಪರಿಚಯ ಇರುತ್ತದೆ. ಪ್ರತಿವಾದಿಯು ನೆಲಮಂಗಲದಲ್ಲಿ ಕೆಲಸಕ್ಕೆ ಸೇರಿದಾಗ ನಮ್ಮ ಮನೆಯಲ್ಲಿಯೇ ವಾಸ ಇದ್ದರು. ನನಗೆ ಊರಿನವರೊಂದಿಗೆ ಪ್ರತಿವಾದಿಯ ಪರಿಚಯ ಇರುತ್ತದೆ. ಲಕ್ಷ್ಮೀಕಾಂತರವರ ಯಾವಾಗ ಮರಣ ಹೊಂದಿದ್ದಾರೆ ಎಂದರೆ ನನಗೆ ದಿನಾಂಕ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಸುಜಾತ. ಅವರಿಗೆ ಮೊದಲನೆ ಹೆಂಡತಿಯಿಂದ ಒಬ್ಬ ಮಗ ಇರುತ್ತಾನೆ. 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು ಇದ್ದರು. 1 ನೇ ಪ್ರತಿವಾದಿಯು ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ತಾಯಿಗೆ ಸಕ್ಕರೆ ಕಾಯಿಲೆ ಇತ್ತು ಎಂದರೆ ಸರಿ. ಸದರಿ ಕಾಯಿಲೆಯಿಂದ ವಾದಿಯ ತಾಯಿಯು ಒಂದು ಕಾಲನ್ನು ತೆಗೆದಿದ್ದರು ಎಂದರೆ ಸರಿ. ಆದ ಕಾರಣ 1 ನೇ ಪ್ರತಿವಾದಿಯು ಅವರ ಮೊದಲನೆ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಆತನ

ಮೊದಲನೆ ಹೆಂಡತಿ ಜೀವಂತ ಇರುವಾಗಲೆ 2 ನೇ ಪ್ರತಿವಾದಿಯೊಂದಿಗೆ 2 ನೇ ವಿವಾಹ ಮಾಡಿಕೊಂಡರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಮೊದಲನೇ ಹೆಂಡತಿ 2 ನೇ ಮದುವೆ ಮಾಡಿಸಿದರು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಮೊದಲನೇ ಹೆಂಡತಿಯ ಮರಣದ ದಿನಾಂಕ ಗೊತ್ತಿದಿಯಾ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ 2 ನೇ ಮದುವೆಯ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಅವರ ಮದುವೆಯ ಆಮಂತ್ರಣ ಪತ್ರಿಕೆ ಹಾಜರುಪಡಿಸಿದ್ದೇನೆ.

1 ನೇ ವಾದಿಯ ತಾಯಿ 1 ನೇ ಪ್ರತಿವಾದಿಯ ತಾಯಿ 2 ನೇ ಮದುವೆಯಾದ ನಂತರ ಸುಮಾರು 2 ವರ್ಷಗಳ ಕಾಲ ಜೀವಂತ ಇದ್ದರು. 1 ನೇ ಪ್ರತಿವಾದಿಯ 2 ನೇ ಮದುವೆ ನಂತರ 1 ನೇ ವಾದಿಯ ತಾಯಿ ಒಂದು ವರ್ಷಗಳ ಕಾಲ ಮಾನಸಿಕವಾಗಿ ಹಿಂಸೆ ಕೊಟ್ಟು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ 2 ನೇ ಪ್ರತಿವಾದಿಯ ಪರಿಚಯ 3 ನೇ ಪ್ರತಿವಾದಿಯ ಜನನ ದಿನಾಂಕದಿಂದ ಗೊತ್ತಿರುತ್ತದೆ. 1 ನೇ ವಾದಿಯ ತಾಯಿಯ ಮರಣದ ನಂತರ, 1 ನೇ ವಾದಿಯ 1 ನೇ ಪ್ರತಿವಾದಿಗೆ ಭಾಗ ಕೇಳಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು 1 ನೇ ವಾದಿಗೆ ಕೊಡಬೇಕಾದ ಆಸ್ತಿಯನ್ನು 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ಭಾಗ ಕೊಡಲು ಒಪ್ಪದೆ ಇದ್ದ ಕಾರಣ ಜಂಟಿ ಖಾತೆ ಇರುತ್ತದೆ ಎಂದರೆ ಒಂದು ಆಸ್ತಿಗೆ ಜಂಟಿ ಖಾತೆ ಇರುತ್ತದೆ.

ದಾವಾ ಆಸ್ತಿಗಳ ಮಾಹಿತಿ ನನಗೆ ಇದೆ ಎಂದರೆ ಸರಿ. ಈ ದಾವೆಯಲ್ಲಿ 5 ಸ್ವತ್ತುಗಳಿಗೆ ಹಾಕಿರುತ್ತಾರೆ. ದಾವಾ ಆಸ್ತಿಗಳ ಸರ್ವೆ ನಂ.94, 95, 127/1 ಎ, 127/2 ಎ. ಸದರಿ ಆಸ್ತಿಗಳು ಯಾವ ಊರಿಗೆ ಸೇರಿದ ಆಸ್ತಿಗಳು, ಅವುಗಳ ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಯ ಸರ್ವೆ ನಂ.127/1 ಎ ಜಮೀನಿನ ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ 1 ನೇ ಪ್ರತಿವಾದಿಯ ಆಸ್ತಿ, ಉತ್ತರಕ್ಕೆ ಸಾವಿತ್ರಮ್ಮನವರ ಆಸ್ತಿ, ಪಶ್ಚಿಮಕ್ಕೆ ಹರ್ಷ ಆಸ್ಪತ್ರೆ. ದಾವಾ ಆಸ್ತಿ ಸರ್ವೆ ನಂ.94 ಜಮೀನಿನ ಪೂರ್ವಕ್ಕೆ ಭದ್ರಮ್ಮ, ಉತ್ತರಕೆ ಬಸವರಾಜು, ಪಶ್ಚಿಮಕ್ಕೆ ಭದ್ರಮ್ಮ, ದಕ್ಷಿಣಕ್ಕೆ ಭದ್ರಮ್ಮನವರ ಜಮೀನು. ಸದರಿ ಎರಡು ಆಸ್ತಿಗಳು ಮಲ್ಲರಬಾಣವಾಡಿಯಲ್ಲಿ ಇರುತ್ತದೆ. (ಈ ಹಂತದಲ್ಲಿ ವಾದಿಯ ವಕೀಲರು ಸಾಕ್ಷಿಯ ಕೈ ತೋರಿಸು ಎಂದು ಹೇಳಿದಾಗ ಸಾಕ್ಷಿ ತನ್ನ ಎಡಗೈ ತೋರಿಸಿದ್ದು ಅದರಲ್ಲಿ ಸಾಕ್ಷಿಯು ಸರ್ವೆ ನಂಬರ್ ಗಳನ್ನು ತನ್ನ ಕೈ ನಲ್ಲಿ ಬರೆದುಕೊಡಿರುತ್ತಾರೆ.)

(Further cross examination deferred as the witness has written the details of survey numbers on his left palm)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi